ಕವಿತೆ





ಎಸ್.ಜಿ. ಸಿದ್ಧರಾಮಯ್ಯ

ಕಲೆ: ವಿಶ್ವನಾಥ್ ಎ.ಎಸ್.



# ನತ್ತು

ಗೋವಿಂದ ಗೋವಿಂದ ಗೋವಿಂದಾ
ದೂರ ದೂರ ಅನತಿ ದೂರದ ಕೂಗಿಗೆ
ಬೆಚ್ಚಿದ ಬೆದರಿದ ಧ್ಯಾನಸ್ಥ ಗುರು ಗೋವಿಂದ.

ನಿಮೀಲಿತ ನೇತ್ರಗಳ ತೆರೆದು ನೋಡಿದ ಗೋವಿಂದ
ಪರಮಾಪ್ತ ಶಿಷುಮಗ ಪಕ್ಕದಲೆ ಕುಳಿತಿದ್ದ ಶಿಶುನಾಳ.
ಧ್ಯಾನಸ್ಥ ಗುರುವಿನ ಧ್ಯಾನಕ್ಕೆ ಭಂಗವಾದುದ ತಿಳಿದು
ನೀರವದ ನೋಟದಲಿ ಗುರುವ ಕಂಡನು ಶಿಷ್ಯ.

ನೋಟ ನೋಟಗಳಲ್ಲಿ ಪ್ರಶ್ನೆ ಉತ್ತರಗಳ
ವಿಸ್ಮಯಪೂರ್ಣ ವಿದಾಯಗಳ ಹುಡುಕಾಟ.
ಬಗೆಹರಿಯದ ಬಗೆ ಬಾವುಣಿಕೆಯ ಮಿಂಚಿನಾಟ
ಸಂಚರಿಸಿದಂತೆ ಸಂಚಲನ ಗೊಂಡ ಭಾವದಾಟ.

ಅನುಗ್ರಹಿತ ಭಾವದಲ್ಲಿ ಕರವ ಮುಗಿದನು ಶಿಷ್ಯ
'ಹೇಳಿ ಗುರುವೇ ಹೇಳಿ ನಾನು ಮಾಡುವುದೇನು'

'ನಾನು ನೀನೇ ಆಗಿ ನೀನು ನಾನೇ ಆಗಿ
ಕರಗಿದ ಕರ್ಪೂರಕ್ಕೆ ಕನವರಿಸುತಿದೆ
ಕೂಗಿಗೆ ಮರುಳಾಗಿದೆ ಜೀವ ಭಾವ
ಮರುಳು ಕಳೆಯುವ ಆಟ
ಶಂಕರಿ ಮೋಹದ ಬೇಟ
ನಾಲಗೆಯ ದಾಹಕ್ಕೆ ನಿಲುಕಲಾರಳು ಗಂಗೆ
ಶಂಕರಿಯೆ ಬೇಕಿಹಳು ತರುವೆಯಾ ಬೇಗ!?'